**ದಿನಾಂಕಃ 25.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**4.** ಅಂದಾಜು 2018-2019 ನೇ ಸಾಲಿನಲ್ಲಿ ನಾನು ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಎಂಟರ್ ಪ್ರೈಸಸ್ ಅನ್ನು ಪ್ರಾರಂಭಿಸಿರಬಹುದು. ಸದರಿ ಎಂಟರ್‌ಪ್ರೈಸಸ್ ಅನ್ನು ನೊಂದಣಿ ಮಾಡಿಸಿರುವುದಿಲ್ಲ. ನಮ್ಮ proprietorship concern ಗೆ ಪಾನ್ ಕಾರ್ಡ್ ತೆಗೆದುಕೊಂಡಿಲ್ಲ. ಜಿಎಸ್‌ಟಿ ಯನ್ನು ನೊಂದಣಿ ಮಾಡಿಸಿರುತ್ತೇನೆ. ಈಗ ಜಿಎಸ್‌ಟಿ ನಂಬರನ್ನು ಹೇಳಲಾಗುವುದಿಲ್ಲ, ದಾಖಲೆಯನ್ನು ನೋಡಿ ಹೇಳಬೇಕಾಗುತ್ತದೆ. ನಮ್ಮ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಎಂಟರ್ ಪ್ರೈಸಸ್ ಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಚಾಮರಾಜಪೇಟೆ ಶಾಖೆಯ ಐಸಿಐಸಿಐ ಬ್ಯಾಂಕಿನಲ್ಲಿ ಚಾಲ್ತಿ ಖಾತೆ ಹೊಂದಿರುತ್ತೇವೆ. ಅದರ ಖಾತೆ ನಂಬರ್ ನನಗೆ ಈಗ ನೆನಪಿರುವುದಿಲ್ಲ. ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಎಂಟರ್ ಪ್ರೈಸಸ್‌ನ ತಿಂಗಳ ವಹಿವಾಟು ಕೆಲವೊಂದು ಸಂದರ್ಭದಲ್ಲಿ ಕನಿಷ್ಟ 15 ರಿಂದ 20 ಸಾವಿರ ಇರತ್ತದೆ, ಕೆಲವೊಂದು ಸಂದರ್ಭದಲ್ಲಿ 75 ಸಾವಿರದಿಂದ ಒಂದು ಲಕ್ಷದವರೆಗೆ ಇರುತ್ತದೆ. ಸದರಿ ಎಂಟರ್‌ಪ್ರೈಸಸ್ ಅನ್ನು ಪ್ರಾರಂಭಿಸಿದ ದಿನದಿಂದ ಇಂದಿನವರೆಗೂ ವಾರ್ಷಿಕ 20 ಲಕ್ಷ ರೂ. ದಾಟಿರುವುದಿಲ್ಲ. ಈ ಹಿಂದೆ ಒಂದು ಕಂಪನಿಯಿಂದ ರೂ.3,50,000/- ರಿಂದ 4 ಲಕ್ಷ ರೂ. ಬಾಕಿ ಇರುತ್ತದೆ ಎಂದು ನೀವು ಸಾಕ್ಷ್ಯ ನುಡಿದಿದ್ದು ಆ ಕಂಪನಿಯ ಹೆಸರನ್ನು ಹೇಳಲು ಸಾಧ್ಯವೇ ಎಂದರೆ ಸಾಕ್ಷಿಯು ಆ ಕಂಪನಿಯ ಹೆಸರನ್ನು ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ರೀತಿ ಹಣ ಬಾಕಿ ಇರುವ ಬಗ್ಗೆ ಯಾವುದೇ ದಾಖಲೆಗಳನ್ನು ಇಟ್ಟಿರುವುದಿಲ್ಲ.

**5.** ನಿಮ್ಮ ವೈಯಕ್ತಿಕ ವ್ಯವಹಾರ ಎಂದರೆ ಯಾವುದು ಎಂದರೆ ಸಾಕ್ಷಿಯು ನಂಬಿಕೆಯ ಮೇಲೆ ವ್ಯವಹಾರ ಮಾಡುವುದು ಎಂದು ನುಡಿಯುತ್ತಾರೆ. ಎಂಟರ್ ಪ್ರೈಸಸ್ ಪರವಾಗಿ

ವ್ಯವಹಾರ ಎಂದರೆ ಯಾವುದು ಎಂದರೆ ಜಿಎಸ್‌ಟಿ ಮುಖಾಂತರ ಎಂಟರ್‌ಪ್ರೈಸಸ್ ವ್ಯವಹಾರ ಮಾಡುವುದು ಎಂದು ನುಡಿಯುತ್ತಾರೆ. ಸುಮಾರು 4-5 ವರ್ಷಗಳ ಹಿಂದೆ ಜಿಎಸ್‌ಟಿ ನಂಬರ್ ನೀಡಿರುತ್ತಾರೆ. ಆನಂತರ ಎಲ್ಲಾ ವ್ಯವಹಾರಗಳು ಎಂಟರ್ ಪ್ರೈಸಸ್ ನ ಜಿಎಸ್‌ಟಿ ಮುಖಾಂತರ ನಡೆಯಿತೇ ಎಂದರೆ ಸಾಕ್ಷಿಯು ಶೇಕಡ 50 ರಷ್ಟು ಜಿಎಸ್‌ಟಿ ಮುಖಾಂತರ ನಡೆದಿದ್ದು ಉಳಿಕೆ 50 ರಷ್ಟು ವೈಯಕ್ತಿಕವಾಗಿ ನಡೆದಿರುತ್ತದೆ ಎಂದು ನುಡಿಯತ್ತಾರೆ. ಏತಕ್ಕಾಗಿ ಆ ರೀತಿ ನಡೆಯಿತು ಎಂದರೆ ಸಾಕ್ಷಿಯ ಕೆಲವೊಮ್ಮೆ ನಗದಾಗಿ ವ್ಯವಹಾರ ನಡೆಯುತ್ತಿತ್ತು ಆ ಕಾರಣ ವೈಯಕ್ತಿಕವಾಗಿ ನಡೆಯಿತು ಎಂದು ನುಡಿಯುತ್ತಾರೆ. ಆ ವೈಯಕ್ತಿಕ ವ್ಯವಹಾರವು ಕಂಪನಿಯ ಪರವಾಗಿ ಆಗಿರುತ್ತದೆಯೋ ಎಂದರೆ ಸಾಕ್ಷಿಯು ಆ ವೈಯಕ್ತಿಕ ವ್ಯವಹಾರವು ಕಂಪನಿಯ ಪರವಾನಗಿ ಆಗಿರುತ್ತದೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.